ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ. **913/2023**

ಸಾಕ್ಷಿಯ ಹೆಸರುಃ ಮಂಜುನಾಥ ಚಾಸಾ ಃ 6

ತಂದೆ ಹೆಸರುಃ ಶಂಕರಪ್ಪ ಪ್ರಾಸಾಃ 2

ವಯಸ್ಸುಃ 46 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಕೊಪ್ಪ

ದಿನಾಂಕಃ19/06/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸದರಿ ಸ್ಥಳ ಮಹಜರನ್ನು ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ನಿಪಿ.2 ಅನ್ನು ನೋಡಿ ಗುರುತಿಸಿರುತ್ತಾರೆ.

ಶೋಧನ ಸಮುಚಿತವನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.4 ಬಿ ಎಂದೂ ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸ್ ನಲ್ಲಿರುವ ಸಹಿಯನ್ನು ನಿಪಿ.5 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಕ್ಯಾಪ್ಟನ್ ಮಾರ್ಟಿನ್ ವಿಸ್ಕಿಯ 90 ಎಂ ಎಲ್ ನ 29, ಪೌಚುಗಳು ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ 90 ಎಂ ಎಲ್ ನ 10 ಪೌಚುಗಳು, 120 ರೂ ಹಣ ಹಾಗೂ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ನೋಡಿ ಸಾಕ್ಷಿ ಗುರುತಿಸುವಲ್ಲಿ ನಿರಾಕರಿಸಿರುತ್ತಾರೆ. ನಾನು ಯಾವುದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

<u>ಪಾಟೀಸವಾಲುಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ</u>

ದಿಃ27/05/2023 ರಂದು ಕೊಪ್ಪ ತಾಲೂಕು ಸೋಮ್ಲಾಪುರ ಗ್ರಾಮದಲ್ಲಿ ಸದಾಶಿವ ಅವರ ಮನೆ ಮುಂದೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಪೋಲಿಸರಿಗೆ ಮಾಹಿತಿ ಬಂದಿದ್ದು ಸದರಿ ಮಾಹಿತಿ ಆಧಾರದ ಮೇಲೆ ಪೊಲೀಸರು ದಾಳಿ ನಡೆಸುವುದಾಗಿ ದಾಳಿ ಕಾಲಕ್ಕೆ ನನ್ನನ್ನು ಮಹಜರ್ ಸಾಕ್ಷಿ ಯಾಗಿ ಮಾಡಿ ನಿಪಿ.5 ರಂತೆ ನೋಟಿಸ್ ಜಾರಿ ಮಾಡಿದ್ದು ನಾನು ಪೋಲಿಸರೊಂದಿಗೆ ಸ್ಥಳಕ್ಕೆ ಹೋಗಿದ್ದು ಸ್ಥಳಕ್ಕೆ ಹೋದಾಗ 6-00 ಗಂಟೆ ಸಮಯಕ್ಕೆ ಸಾರ್ವಜನಿಕರ ಗುಂಪು ಕೂಡಿಸಿಕೊಂಡು ಕಪ್ಪುಬಣ್ಣದ ಪ್ಯಾಂಟ್ ಹಾಗೂ ಕ್ರೀಮ್ ಬಣ್ಣದ ಶರ್ಟ್ ದರಿಸಿದ್ದ ವ್ಯಕ್ತಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಹಿಡಿದುಕೊಂಡು ಮದ್ಯದ ಟೆಟ್ರಾ ಪ್ಯಾಕುಗಳನ್ನು ಹಿಡಿದುಕೊಂಡು ಅಲ್ಲಿದ್ದವರಿಗೆ ಮಾರಾಟ ಮಾಡುತ್ತಿದ್ದು ಪೋಲಿಸರನ್ನು ನೋಡಿ ಸದರಿ ವ್ಯಕ್ತಿ ಓಡಿದ್ದು ನಮ್ಮ ಸಮಕ್ಷಮ ಆತನನ್ನು ಹಿಡಿದು ವಿಚಾರಿಸಿದಾಗ ಸದಾಶಿವ ಶೆಟ್ಟಿ ಎಂದು ತಿಳಿಸಿದ್ದು ಮದ್ಯ ಮಾರಾಟ ಮಾಡಲು ಯಾವುದೆ ಪರವಾನಿಗೆ ಇಲ್ಲ ಎಂದು ತಿಳಿಸಿದರು. ಪ್ಲಾಸ್ಟಿಕ್ ಕವರನ್ನು ನೋಡಿದಾಗ ಅದರಲ್ಲ ಕ್ಯಾಪ್ಟನ್ ಮಾರ್ಟಿನ್ ವಿಸ್ಕಿ 90 ಎಂ ಎಲ್ ನ 29 ಮದ್ಯದ ಟೆಟ್ರಾ ಪ್ಯಾಕುಗಳು ಇದ್ದು ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ಯ 90 ಎಂ ಎಲ್ ನ 10 ಮದ್ಯದ ಟೆಟ್ರಾ ಪ್ಯಾಕುಗಳು ಇದ್ದು ಹಾಗೂ ನಂತರ ಸದರಿ ವ್ಯಕ್ತಿ ತನ್ನ ಬಳಿ ಇದ್ದ ಹಣ ಹಾಜರುಪಡಿಸಿದ್ದು ಸದರಿ ಹಣವನ್ನು ನಮ್ಮ ಸಮಕ್ಷಮ ನೋಡಲಾಗಿ ನೂರು ಮುಖ ಬೆಲೆಯ ಒಂದು ನೋಟು, 10 ರೂನ 2 ನೋಟು ಒಟ್ಟು ರೂ. 120/- ಇದ್ದು ನಂತರ ಸದರಿ ಮದ್ಯವನ್ನು ಪೋಲಿಸರು ವಶಕ್ಕೆ ಪಡೆದು ಕೆಪಿಎಸ್ ಎಂಬ ಸೀಲ್ ಹಾಕಿ 6-15 ರಿಂದ 7-15 ರವರೆಗೂ ನನ್ನ ಹಾಗೂ ಚಾಸಾ 5 ರವರ ಸಮಕ್ಷಮ ಸ್ಥಳ ಮಹಜರ್ ಜರುಗಿಸಿ ನಿಪಿ.2 ರಂತೆ ಪೋಟೊ ತೆಗೆಯಲಾಗಿತ್ತು ಎಂದರೆ ಸರಿಯಲ್ಲ.

ದಿಃ27/05/2023 ರಂದು ನಾನು ಕೊಪ್ಪ ಠಾಣೆಯಲ್ಲಿ ನನ್ನಹೇಳಿಕೆ ನೀಡಿದ್ದು ದಿಃ25/05/2023 ರಂದು ಸುಮಾರು 17-30 ಗಂಟೆಗೆ ಪಿಸಿ 78 ಪ್ರಶಾಂತ್ ಬಡಿದಾಳ್ ಹಾಗೂ ಪಿಸಿ 358 ಸಿದ್ದೇಶ್ ಅವರೊಂದಿಗೆ ಇಲಾಖಾ ಜೀಪ್ ನಂಬರ್ ಕೆಎ - 18 ಜಿ 712 ರಲ್ಲಿ ಸೊಮ್ಲಾಪುರ ದಲ್ಲಿ ಗಸ್ತಿನಲ್ಲಿದ್ದಾಗ ಒಬ್ಬ ವ್ಯಕ್ತಿಯು ,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,

,,,,,,,,,,, ಮೇಲ್ಕಂಡ ಆರೋಪಿ ಮೇಲೆ ಮುಂದಿನ ಕಾನೂನು ಕ್ರಮ ಜರುಗಿಸುವಂತೆ ನೀಡಿದ ವರದಿ ಮೇರೆಗೆ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಆರೋಪಿ ಹಾಗೂ ವಶಕ್ಕೆ ಪಡೆದ ವಸ್ತುಗಳನ್ನು ನೋಡಿದ್ದು ಪುನಃ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ

ಹೇಳಿದ್ದು, ಸಾಕ್ಷಿಯು ಹೇಳಿಕೆಯ ಭಾಗವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ